ಕರ್ನಾಟಕ ವಿಧಾನಸಭೆ

ಮಂಗಳವಾರ ೨೯ನೇ ಜನವರಿ ೨೦೦೨ ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦ ಗಂಟೆ ೦೦ ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

೧. ರಾಜ್ಯದಲ್ಲಿ ನಡೆದ ಛಾಪಾ ಕಾಗದ ಹಗರಣದ ಬಗ್ಗೆ ಸಿ.ಬಿ.ಐ. ತನಿಖೆಗೆ ವಹಿಸಲು ಒತ್ತಾಯ ಹಾಗು ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು)ರವರ ರಾಜೀನಾಮೆಗೆ ಒತ್ತಾಯಿಸಿ ವಿರೋಧ ಪಕ್ಷದವರಿಂದ ಧರಣಿ.

(ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಹೂಡಿದ್ದರು)

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ನಾವು ಇಲ್ಲಿ ಧರಣಿ ಕುಳಿತಿದ್ದೇವೆ. ಈ ವಿಚಾರದ ಬಗ್ಗೆ ಸರ್ಕಾರಕ್ಕೆ ಈಗಾಗಲೇ ನಾವು ಸಾಕಷ್ಟು ಸಲ ತಿಳಿಸಿದ್ದೇವೆ. ನಕಲಿ ಛಾಪಾ ಕಾಗದದಿಂದಾಗಿ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿ ಆದಾಯ ಕಡಿಮೆಯಾಗುತ್ತಿದೆ. ಇದು ಬಹಳ ಗಂಭೀರವಾದ ವಿಚಾರ. ಇದರಲ್ಲಿ ಒಂದು ರಾಜಕೀಯ ಒತ್ತಡವಿರುವುದರಿಂದ ಇದನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಬೇಕೆಂದು ಸದನದಲ್ಲಿರುವ ಎಲ್ಲಾ ವಿರೋಧ ಪಕ್ಷದ ಶಾಸಕರು ಧರಣಿ ಸತ್ಯಾಗ್ರಹ ಮತ್ತು ಬಹಿಷ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ. ಇದೇ ರೀತಿ ವಿಧಾನ ಪರಿಷತ್ತಿನಲ್ಲೂ ಕೂಡ ಇಡೀ ವಿರೋಧ ಪಕ್ಷದ ಶಾಸಕರುಗಳು ಧರಣಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಇದರಿಂದ ಸರ್ಕಾರ ಇದೊಂದು ಸಾರ್ವಜನಿಕ ಮಹತ್ವವಾದ ವಿಚಾರವೆಂದು ತಿಳಿದುಕೊಳ್ಳಬೇಕು. ಇದರಲ್ಲಿ ಯಾವುದೇ ಒಂದು ರಾಜಕೀಯ ಒತ್ತಡವಿಲ್ಲದೆ ಇನ್ವೆಸ್ಟಿಗೇಷನ್ ಆಗಬೇಕೆಂಬುದು ಬಹಳ ಪ್ರಮುಖವಾದ ವಿಚಾರವಾಗಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಮೊಂಡುತನ ಮಾಡಬಾರದು. ಹಿಂದೆ ಹಲವಾರು ಪ್ರಕರಣಗಳಲ್ಲಿ ಸರ್ಕಾರ ತಕ್ಷಣವೇ ಸಿ.ಬಿ.ಐ. ತನಿಖೆಗೆ ಒಪ್ಪಿಕೊಂಡಿರುವ ಉದಾಹರಣೆಗಳು ಇವೆ. ಕಂಬಾಲಪಲ್ಲಿ ಪ್ರಕರಣದ ಬಗ್ಗೆ ವಿರೋಧ ಪಕ್ಷದವರು ಒತ್ತಾಯ ಮಾಡಿದ ಸಂದರ್ಭದಲ್ಲಿ ತಕ್ಷಣವೇ ಸರ್ಕಾರ ಸ್ಪಂದನ ಮಾಡಿ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ವಹಿಸಿತು. ಈ ಸಂದರ್ಭದಲ್ಲಿ ಇದರ ಬಗ್ಗೆ ಸಹ ಸರ್ಕಾರ ಮೀನಾಮೇಷ ನೋಡದೆ ತಕ್ಷಣವೇ ಸಿ.ಬಿ.ಐ.ಗೆ ವಹಿಸಲು ಒಪ್ಪಿಗೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಮೊನ್ನೆ ಖಾನಪುರದಲ್ಲಿರುವ ಕರೀಂಲಾಲಾನ ಮನೆಯ ಮೇಲೆ ಪೊಲೀಸರು ಧಾಳಿ ಮಾಡಿ